*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ,*
*ಮೆಯೋಹಾಲ್ ಘಟಕ, ಬೆಂಗಳೂರು*
*(58ನೇ ನಗರ ಸಿವಿಲ್ ನ್ಯಾಯಾಂಗಣ)*

*ದಿನಾಂಕಃ 29ನೇ ಮಾಹೆ ಫೆಬ್ರವರಿ, 2020*

*-ಃ ಉಪಸ್ಥಿತರು ಃ-*

*ಶ್ರೀ ಬಾಬಾಸಾಹೇಬ್ ಎಲ್. ಜಿನರಾಳ್ಕರ್, ಎಂ.ಎ., ಎಲ್ಎಲ್.ಎಂ.,*
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು*

*ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆಃ 25119/2020*

ಅರ್ಜಿದಾರರು/ಃ ಚಂದ್ರು ಆರ್. ಬಿನ್ಃ ಲೇಟ್ ಟಿ. ರಾಮು,
(1ನೇ ಆರೋಪಿತ) ಸುಮಾರು 40 ವರ್ಷ, ವಾಸಃ ಸೀಗೇಹಳ್ಳಿ,
ವಿರ್ಗೊನಗರ ಅಂಚೆ, ಕೆ.ಆರ್.ಪುರಂ,
ಬೆಂಗಳೂರು – 560049.

(2ನೇ ಆರೋಪಿತ) ನವೀನ್ ಬಿನ್ಃ ಜಯಪ್ಪ,
ಸುಮಾರು 28 ವರ್ಷ,

(3ನೇ ಆರೋಪಿತ) ಮಹಾದೇವ ಬಿನ್ಃ ಜಯಪ್ಪ,
ಸುಮಾರು 30 ವರ್ಷ,

(4ನೇ ಆರೋಪಿತ) ಜಯಪ್ಪ ಬಿನ್ಃ ಲೇಟ್ ಮಲ್ಲಪ್ಪ,
ಸುಮಾರು 65 ವರ್ಷ,

2 ರಿಂದ 4ನೇ ಆರೋಪಿತರು ವಾಸಃ ನಂ.19,
ದಾಸರ ಕಾಲೋನಿ, 2ನೇ ಮುಖ್ಯರಸ್ತೆ,
ಸೀಗೇಹಳ್ಳಿ, ವಿರ್ಗೊನಗರ ಅಂಚೆ, ಕೆ.ಆರ್.ಪುರಂ,
ಬೆಂಗಳೂರು – 560077.

(ಪರವಾಗಿ ಶ್ರೀ ಟಿ.ಕೆ. ಸುರೇಶ, ವಕೀಲರು)

- ವಿರುದ್ಧ -

ಎದುರುದಾರರು: ರಾಜ್ಯದ ಪರವಾಗಿ ಕೆ.ಆರ್.ಪುರಂ ಪೊಲೀಸ್ ಠಾಣೆ,
ಬೆಂಗಳೂರು ನಗರ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

## ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲಿನ ಆದೇಶ

ಈ ಅಪರಾಧಿಕ ಸಂಕೀರ್ಣ ಅರ್ಜಿಯನ್ನು ಅರ್ಜಿದಾರರು/1ರಿಂದ 4ನೇ ಆರೋಪಿತರು ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಸಲ್ಲಿಸಿ, ಬೆಂಗಳೂರು, ಮೆಯೋಹಾಲ್ ಘಟಕದ 10ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ನ್ಯಾಯಾಲಯದಲ್ಲಿ ತಮ್ಮ ವಿರುದ್ಧ ಕೆ.ಆರ್.ಪುರಂ ಪೊಲೀಸ್ ಠಾಣೆಯ ಕ್ರೈಮ್ ನಂಬರ್: 43/2020 ರಲ್ಲಿ ಭಾರತ ದಂಡ ಸಂಹಿತೆ ಕಲಂ 447, 379, 427, 506 ಹಾಗೂ ಸಹವಾಚಕ ಕಲಂ 34ರಡಿಯಲ್ಲಿ ದಾಖಲಾದ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದಾರೆ.

2. ಅರ್ಜಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ:-

ತಾವು ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯಗಳನ್ನು ಎಸಗಿರುವುದಿಲ್ಲವೆಂದೂ, ತಮ್ಮನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದೂ, ಪಿರ್ಯಾದಿದಾರರು ತಮ್ಮ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾರೆಂದೂ, ಆರೋಪಿಸಿದಂತಹ ಅಪರಾಧಗಳ್ಯಾವುವು ಕಡ್ಡಾಯವಾಗಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವಂತಹ ಅಪರಾಧಗಳಲ್ಲವೆಂದೂ, ಬೆಂಗಳೂರಿನ ಖಾಯಂ ನಿವಾಸಿಗಳಾದ ತಾವು ಕಾನೂನು ಪರಿಪಾಲನೆ ಮಾಡುವ ನಾಗರಿಕರಿದ್ದು, ತನಿಖೆಗೆ

ಸಹಕರಿಸಲು ಹಾಗೂ ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸಲು ಮತ್ತು ಸೂಕ್ತ ಜಾಮೀನುದಾರರನ್ನು ನೀಡಲು ತಾವು ಸಿದ್ದರಿದ್ದೇವೆಂದೂ, ತಮಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ, ತುಂಬಲಾರದ ತೊಂದರೆ ಉಂಟಾಗುತ್ತದೆ ಎಂದು ಹೇಳಿ, ತಮ್ಮ ಅರ್ಜಿಯನ್ನು ಪುರಸ್ಕರಿಸಬೇಕೆಂದು ಅರ್ಜಿದಾರರು/1ರಿಂದ 4ನೇ ಆರೋಪಿತರು ಕೋರಿಕೊಂಡಿದ್ದಾರೆ.

3. ಸರ್ಕಾರಿ ಅಭಿಯೋಜಕರು ಸಲ್ಲಿಸಿರುವ ತಕರಾರಿನಲ್ಲಿ, ಅರ್ಜಿದಾರರು/1ರಿಂದ 4ನೇ ಆರೋಪಿತರು ಗುನ್ನೆಯಾದಾಗಿನಿಂದಲೂ ತನಿಖೆಗೆ ಲಭ್ಯವಿಲ್ಲದೆ ಪರಾರಿಯಲ್ಲಿದ್ದು, ಆ ಬಗ್ಗೆ ಯಾವುದೇ ಕಾರಣಗಳನ್ನು ನಮೂದಿಸಿರುವುದಿಲ್ಲವೆಂದೂ, ತನಿಖೆ ಇನ್ನೂ ಚಾಲ್ತಿಯಲ್ಲಿದ್ದು, ಅವರನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಟ್ಟಲ್ಲಿ ಅಭಿಯೋಜನಾ ಪರ ಸಾಕ್ಷ್ಯಗಳನ್ನು ನಾಶಪಡಿಸುವ, ತನಿಖೆ ಕುಂಠಿತವಾಗುವ ಹಾಗೂ ಅವರುಗಳು ಪುನಃ ಪರಾರಿಯಾಗುವ ಸಾಧ್ಯತೆಗಳಿವೆ ಎಂದು ಹೇಳಿ, ಅವರ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

4. ಕಡತವನ್ನು ಪರಿಶೀಲಿಸಲಾಯಿತು ಹಾಗೂ ಉಭಯತರರ ವಾದ ವಿವಾದವನ್ನು ಆಲಿಸಲಾಯಿತು.

5. ಈ ಹಂತದಲ್ಲಿ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೇ:-

i) ಅರ್ಜಿದಾರರು/1ರಿಂದ 4ನೇ ಆರೋಪಿತರು ಈ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂ 438ರಡಿಯಲ್ಲಿ ನಿರೀಕ್ಷಣಾ ಜಾಮೀನನ್ನು ಪಡೆಯಲು ಅರ್ಹರಿದ್ದಾರೆಯೇ?

ii) ಏನು ಆದೇಶ?

6. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ:-

ಅಂಶ i): ಸಕಾರಾತ್ಮಕವಾಗಿ,

ಅಂಶ ii): ಅಂತಿಮ ಆದೇಶದಂತೆ, ಈ ಕೆಳಕಂಡಂತೆ:

ಕಾ ರ ಣ ಗ ಳು:

7. ಅಂಶ i): ತಾವು ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯಗಳನ್ನು ಎಸಗಿರುವುದಿಲ್ಲವೆಂದೂ, ತಮ್ಮನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದೂ, ತಾವು ಕಾನೂನು ಪರಿಪಾಲನೆ ಮಾಡುವ ನಾಗರಿಕರಿದ್ದು, ತಮಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ ತುಂಬಲಾರದ ತೊಂದರೆಯಾಗುತ್ತದೆ ಎಂದು ಹೇಳಿ, ತಮ್ಮನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕೆಂದು ಅರ್ಜಿದಾರರು/1ರಿಂದ 4ನೇ ಆರೋಪಿತರು ತಮ್ಮ ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ. ಅರ್ಜಿದಾರರ/1ರಿಂದ 4ನೇ ಆರೋಪಿತರ ವಿರುದ್ಧ ಯಾವುದೇ ಅಪಾದನೆಗಳು ಕಂಡುಬರುತ್ತಿಲ್ಲವೆಂದೂ, ಆ ಕಾರಣ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬೇಕೆಂದು ಅವರ ಪರ ವಕೀಲರು ವಾದಿಸಿದ್ದಾರೆ. ಅರ್ಜಿದಾರರು/1 ರಿಂದ 4ನೇ ಆರೋಪಿತರು ಮನೆಯ ಕಾಮಗಾರಿ ನಡೆಯುತ್ತಿದ್ದ ಕಟ್ಟಡಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ನಿರ್ಮಾಣ ಹಂತದಲ್ಲಿರುವ ಮನೆಯ ಕಾಂಕ್ರೇಟ್ ಒಳಗೆ ಹಾಕಿರುವ ಕಂಬಿಗಳನ್ನು ಕೆಡವಿ ಹಾಳು ಮಾಡಿದ್ದು ಇದರಿಂದ ಪಿರ್ಯಾದಿದಾರರಿಗೆ ಸುಮಾರು 10 ಲಕ್ಷ ರೂ.ಗಳಷ್ಟು ನಷ್ಟವಾಗಿರುತ್ತದೆ ಹಾಗೂ ಸುಮಾರು 1 ಲಕ್ಷ ರೂ. ಮೌಲ್ಯದ ಸ್ಟೀಲ್ ರಾಡ್‌ಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ, ಸದರಿ ವ್ಯಕ್ತಿಗಳು ಪಿರ್ಯಾದಿದಾರರ ವಿಡಿಯೋಗಳನ್ನು ಮಾಡಿಕೊಂಡು ಹೋಗಿರುವುದರಿಂದ ಅವರಿಗೆ

ಮಾನಸಿಕ ಹಿಂಸೆ ಹಾಗೂ ಪ್ರಾಣಭಯವಾಗುತ್ತಿದೆ ಎನ್ನುವುದು ಪಿರ್ಯಾದಿದಾರರ ದೂರಿನಿಂದ ವ್ಯಕ್ತವಾಗುತ್ತಿದ್ದು, ಅರ್ಜಿದಾರರು/1 ರಿಂದ 4ನೇ ಆರೋಪಿತರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದಲ್ಲಿ ಅವರು ಅಭಿಯೋಜನಾ ಪರ ಸಾಕ್ಷ್ಯಗಳನ್ನು ನಾಶಪಡಿಸುವ ಹಾಗೂ ಪುನಃ ಪರಾರಿಯಾಗುವ ಸಾಧ್ಯತೆಗಳಿರುವ ಕಾರಣ, ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಾರದು ಎಂದು ಸರ್ಕಾರಿ ಅಭಿಯೋಜಕರು ವಾದಿಸಿದ್ದಾರೆ.

8. ಪಿರ್ಯಾದಿಯ ಸೈಟ್ ನಂ.141 ಶಿರಡಿ ಸಾಯಿ ಲೇಔಟ್ 2ನೇ ಕ್ರಾಸ್ 3ನೇ ಮೈನ್, ಆರ್.ಟಿ.ಓ. ಕಛೇರಿ ಕೆ.ಆರ್.ಪುರಂ ಬೆಂಗಳೂರು ನಗರ ಈ ವಿಳಾಸದಲ್ಲಿರುವ ಸೈಟು ಸುಮಾರು 15 ವರ್ಷಗಳಿಂದ ಪಿರ್ಯಾದಿದಾರರ ಸ್ವಾಧೀನದಲ್ಲಿದ್ದು, ಈಗ ಮನೆಯ ಕಾಮಗಾರಿ ನಡೆಯುತ್ತಿದ್ದು ಮೊದಲಿನಿಂದಲೂ ಚಂದ್ರು ಬಿನ್ಃ ರಾಮು ಮತ್ತು ಆತನ ಸಹಚರರಾದ ನವೀನ್, ಮಹದೇವ್ ಮತ್ತು ಜಯಪ್ಪರವರು ಪಿರ್ಯಾದಿದಾರರ ಹತ್ತಿರ ದುಡ್ಡು ಕೊಡುವಂತೆ ಪೀಡಿಸುತ್ತಿದ್ದು, ದಿನಾಂಕ 25-01-2020 ಕಟ್ಟಡಕ್ಕೆ ಮೋಲ್ಡ್ ಹಾಕುತ್ತಿರುವಾಗ ಚಂದ್ರು ಮತ್ತು ಆತನ ಸಹಚರರು ಬೆಳಗ್ಗೆಯಿಂದ ಪಿರ್ಯಾದಿದಾರರ ಕಟ್ಟಡ ಸುತ್ತ ತಿರುಗುವುದು ಮತ್ತು ವಿಡಿಯೋ ಮಾಡುವುದು ಮಾಡುತ್ತಿದ್ದರು. ನಂತರ ದಿನಾಂಕ 26-01-2020ರಂದು ಮದ್ಯರಾತ್ರಿ ಸುಮಾರು 12-00ಗಂಟೆಯಿಂದ ಬೆಳಗಿನ ಜಾವ 4-00 ಗಂಟೆಯ ನಡುವೆ ಪಿರ್ಯಾದಿದಾರರ ಜಾಗದಲ್ಲಿ ಅಕ್ರಮವಾಗಿ ಪ್ರವೇಶ ಮಾಡಿ ನಿರ್ಮಾಣ ಹಂತದಲ್ಲಿರುವ ಮನೆಯ ಕಾಂಕ್ರೇಟ್ ಒಳಗೆ ಹಾಕಿರುವ ಕಂಬಿಗಳನ್ನು ಕೆಡವಿ ಹಾಳು ಮಾಡಿದ್ದು ಇದರಿಂದ ಪಿರ್ಯಾದಿದಾರರಿಗೆ ಸುಮಾರು 10 ಲಕ್ಷ ರೂ. ಗಳಷ್ಟು ನಷ್ಟವಾಗಿರುತ್ತದೆ

ಹಾಗೂ ಸುಮಾರು 1 ಲಕ್ಷ ರೂ. ಮೌಲ್ಯದ ಸ್ಟೀಲ್ ರಾಡ್‌ಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಸದರಿ ವ್ಯಕ್ತಿಗಳು ಪಿರ್ಯಾದಿದಾರರ ವಿಡಿಯೋಗಳನ್ನು ಮಾಡಿಕೊಂಡು ಹೋಗಿರುವುದರಿಂದ ಪಿರ್ಯಾದಿದಾರರಿಗೆ ಮಾನಸಿಕ ಹಿಂಸೆ ಹಾಗೂ ಪ್ರಾಣಭಯವಾಗುತ್ತಿದ್ದು, ಸದರಿ ವ್ಯಕ್ತಿಗಳ ವಿರುದ್ದ ಸೂಕ್ತ ಕಾನೂನು ಕ್ರಮ ಜಗುಗಿಸಬೇಕೆಂದು ನೀಡಿದ ದೂರಿನನ್ವಯ ಪ್ರಕರಣ ನೋಂದಣಿಯಾಗಿದೆ ಎನ್ನುವುದು ಅಭಿಯೋಜನೆಯ ಪ್ರಕರಣವಾಗಿರುತ್ತದೆ.

9. ಅರ್ಜಿದಾರರು/1 ರಿಂದ 4ನೇ ಆರೋಪಿತರು ಪಿರ್ಯಾದಿದಾರರ ಮನೆಯ ಕಾಮಗಾರಿ ನಡೆಯುತ್ತಿದ್ದ ಕಟ್ಟಡಕ್ಕೆ ಅಕ್ರಮವಾಗಿ ಪ್ರವೇಶ ಮಾಡಿ ನಿರ್ಮಾಣ ಹಂತದಲ್ಲಿರುವ ಮನೆಯ ಕಾಂಕ್ರೀಟ್ ಒಳಗೆ ಹಾಕಿರುವ ಕಂಬಿಗಳನ್ನು ಕೆಡವಿ ಹಾಳು ಮಾಡಿದ್ದು ಇದರಿಂದ ಪಿರ್ಯಾದಿದಾರರಿಗೆ ಸುಮಾರು 10 ಲಕ್ಷ ರೂ. ಗಳಷ್ಟು ನಷ್ಟವಾಗಿರುತ್ತದೆ ಹಾಗೂ ಸುಮಾರು 1 ಲಕ್ಷ ರೂ. ಮೌಲ್ಯದ ಸ್ಟೀಲ್ ರಾಡ್‌ಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂಬೆಲ್ಲಾ ಅಂಶಗಳು ಕೇವಲ ಸಾಕ್ಷ್ಯಾಧಾರಗಳಿಂದಲೇ ರುಜುವಾತಾಗಬೇಕಾಗಿರುವ ಸಂಗತಿಗಳಾಗಿವೆ ಮತ್ತು ಈ ಹಂತದಲ್ಲಿಯೇ ಅರ್ಜಿದಾರರು/1 ರಿಂದ 4ನೇ ಆರೋಪಿತರು ಆರೋಪಿಸಿದಂತಹ ಅಪರಾಧಗಳನ್ನು ಎಸಗಿದ್ದಾರೆ ಎಂದು ಪೂರ್ವಭಾವನೆಯುನ್ನು ತಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಮೇಲಾಗಿ, ಆರೋಪಿಸಿದಂತಹ ಅಪರಾಧಗಳ್ಯಾವುವು ಕಡ್ಡಾಯವಾಗಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸುವಂತಹ ಅಪರಾಧಗಳಾಗಿರುವುದಿಲ್ಲ. ಅರ್ಜಿದಾರರು /1 ರಿಂದ 4ನೇ ಆರೋಪಿತರು ವಿಳಾಸವನ್ನು ಗಮನಿಸಲಾಗಿ, ಅವರುಗಳು ಬೆಂಗಳೂರಿನ ಖಾಯಂ ನಿವಾಸಿಗಳು ಎಂದು ಕಂಡುಬರುತ್ತಿರುವುದರಿಂದ,

ಅವರುಗಳ ಹಾಜರಾತಿಯನ್ನು ಸೂಕ್ತ ಷರತ್ತುಗಳನ್ನು ವಿಧಿಸುವ ಮೂಲಕ ಪಡೆಯಬಹುದಾಗಿದೆ. ಸರ್ಕಾರಿ ಅಭಿಯೋಜಕರು ವ್ಯಕ್ತಪಡಿಸಿರುವ ಆತಂಕಗಳನ್ನು ಸೂಕ್ತ ಷರತ್ತುಗಳನ್ನು ವಿಧಿಸುವ ಮೂಲಕ ಅರ್ಜಿದಾರರು/1 ರಿಂದ 4ನೇ ಆರೋಪಿತರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಹುದಾಗಿದೆ ಎಂಬ ಅಭಿಪ್ರಾಯಕ್ಕೆ ಬಂದು ಮೇಲಿನ ಅಂಶ ಒಂದನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

10. ಅಂಶ ii): ಅಂಶ ಒಂದರಲ್ಲಿ ನೀಡಿರುವ ಕಾರಣಗಳಿಂದ ಈ ಕೆಳಕಂಡ,

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರರು/1 ರಿಂದ 4ನೇ ಆರೋಪಿತರಾದ ಚಂದ್ರು ಆರ್, ನವೀನ್, ಮಹಾದೇವ ಮತ್ತು ಜಯಪ್ಪ ಇವರುಗಳ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಕೆ.ಆರ್.ಪುರಂ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 43/2020 ರಲ್ಲಿ ಭಾರತ ದಂಡ ಸಂಹಿತೆ ಕಲಂ 447, 379, 427, 506 ಹಾಗೂ ಸಹವಾಚಕ ಕಲಂ 34ರಡಿಯಲ್ಲಿ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರರು/1 ರಿಂದ 4ನೇ ಆರೋಪಿತರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರರು/1 ರಿಂದ 4ನೇ ಆರೋಪಿತರು ತಲಾ 50,000/- ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು

ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರರನ್ನು ಬೆಂಗಳೂರಿನ ಮೆಯೋ ಹಾಲ್ ಘಟಕದ 10ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗೆ ತೃಪ್ತಿಯಾಗುವಂತೆ ನೀಡತಕ್ಕದ್ದು,

2. ಅರ್ಜಿದಾರರು/1 ರಿಂದ 4ನೇ ಆರೋಪಿತರು ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು,

3. ಅರ್ಜಿದಾರರು/1 ರಿಂದ 4ನೇ ಆರೋಪಿತರು ತನಿಖೆಗೆ ಸಹಕರಿಸತಕ್ಕದ್ದು ಹಾಗೂ ಅಂತಿಮ ವರದಿ ಸಲ್ಲಿಸುವವರೆಗೂ ಪ್ರತಿ ತಿಂಗಳ ಮೊದಲನೇ ಭಾನುವಾರದಂದು ಬೆಳಿಗ್ಗೆ 10-00 ರಿಂದ ಸಂಜೆ 5-00 ಗಂಟೆಯ ಒಳಗಾಗಿ ಠಾಣಾಧಿಕಾರಿ ಮುಂದೆ ತಪ್ಪದೇ ಹಾಜರಾತಿ ನೀಡತಕ್ಕದ್ದು,

4. ಅರ್ಜಿದಾರರು/1 ರಿಂದ 4ನೇ ಆರೋಪಿತರು ಈ ಪ್ರಕರಣ ಇತ್ಯರ್ಥವಾಗುವವರೆಗೂ ನ್ಯಾಯಾಲಯದ ಮುಂದೆ ಪ್ರತಿ ವಿಚಾರಣಾ ದಿನಾಂಕದಂದು ತಪ್ಪದೇ ಹಾಜರಾಗತಕ್ಕದ್ದು ಹಾಗೂ ತಮ್ಮ ವಾಸಸ್ಥಳವನ್ನು ಬದಲಾಯಿಸಬೇಕಾದಲ್ಲಿ ನ್ಯಾಯಾಲಯದ ಅನುಮತಿ ಪಡೆಯತಕ್ಕದ್ದು,

5. ಅರ್ಜಿದಾರರು/1 ರಿಂದ 4ನೇ ಆರೋಪಿತರು ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾಧಾರಗಳನ್ನು ನಾಶಪಡಿಸಬಾರದು,
6. ಅರ್ಜಿದಾರರು/1 ರಿಂದ 4ನೇ ಆರೋಪಿತರು ಭವಿಷ್ಯದಲ್ಲಿ ಈ ರೀತಿಯ ಯಾವುದೇ ಕೃತ್ಯಗಳನ್ನು ಎಸಗಬಾರದು,
7. ಈ ಆದೇಶವಾದ ಹದಿನೈದು ದಿನಗಳ ಒಳಗಾಗಿ ಅರ್ಜಿದಾರರು/1 ರಿಂದ 4ನೇ ಆರೋಪಿತರು ಬೆಂಗಳೂರಿನ ಮೆಯೋಹಾಲ್ ಘಟಕದ 10ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ನ್ಯಾಯಾಲಯದ ಮುಂದೆ ಹಾಜರಾಗಿ ನಿಯಮಿತ ಜಾಮೀನು ಕೋರಿ ಅರ್ಜಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮಂಜೂರಾಗಿರುವ ನಿರೀಕ್ಷಣಾ ಜಾಮೀನು ತನ್ನಿಂತಾನೇ ರದ್ದಾಗುವುದು.

*(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ತಿದ್ದಿ ದಿನಾಂಕ 29ನೇ ಮಾಹೆ ಫೆಬ್ರವರಿ 2020ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ)*

*(ಬಾಬಾಸಾಹೇಬ್ ಎಲ್. ಜಿನರಾಳ್ಕರ್),*
*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*

ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ (ಪ್ರತ್ಯೇಕ ಆದೇಶದಂತೆ) ಘೋಷಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರ/ 3ನೇ ಆರೋಪಿತನಾದ ರಾಜಣ್ಣ ಡಿ. ಈತನ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಕೆ.ಆರ್.ಪುರಂ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 263/2015 ರಲ್ಲಿ ಭಾರತ ದಂಡ ಸಂಹಿತೆ ಕಲಂ 468, 471 ಹಾಗೂ 420 ರಡಿಯಲ್ಲಿ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರ/3ನೇ ಆರೋಪಿತನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರ/3ನೇ ಆರೋಪಿತ 50,000/- ರೂಪಾಯಿಗಳಿಗೆ ವೈಯುಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೆ ಮೊತ್ತಕ್ಕೆ ಒಬ್ಬ ಜಾಮೀನುದಾರರನ್ನು ಬೆಂಗಳೂರಿನ ಮೆಯೋ ಹಾಲ್ ಘಟಕದ 10ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗೆ ತೃಪ್ತಿಯಾಗುವಂತೆ ನೀಡತಕ್ಕದ್ದು,

2. ಅರ್ಜಿದಾರ/3ನೇ ಆರೋಪಿತ ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು,
3. ಅರ್ಜಿದಾರ/3ನೇ ಆರೋಪಿತ ತನಿಖೆಗೆ ಸಹಕರಿಸತಕ್ಕದ್ದು.
4. ಅರ್ಜಿದಾರ/3ನೇ ಆರೋಪಿತ ಈ ಪ್ರಕರಣ ಇತ್ಯರ್ಥವಾಗುವವರೆಗೂ ನ್ಯಾಯಾಲಯದ ಮುಂದೆ ಪ್ರತಿ ವಿಚಾರಣಾ ದಿನಾಂಕದಂದು ತಪ್ಪದೇ ಹಾಜರಾಗತಕ್ಕದ್ದು ಹಾಗೂ ತಮ್ಮ ವಾಸಸ್ಥಳವನ್ನು ಬದಲಾಯಿಸಬೇಕಾದಲ್ಲಿ ನ್ಯಾಯಾಲಯದ ಅನುಮತಿ ಪಡೆಯತಕ್ಕದ್ದು,
5. ಅರ್ಜಿದಾರ/3ನೇ ಆರೋಪಿತ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಅಭಿಯೋಜನೆಯ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾಧಾರಗಳನ್ನು ನಾಶಪಡಿಸಬಾರದು,
6. ಅರ್ಜಿದಾರ/3ನೇ ಆರೋಪಿತ ಭವಿಷ್ಯದಲ್ಲಿ ಈ ರೀತಿಯ ಯಾವುದೇ ಕೃತ್ಯಗಳನ್ನು ಎಸಗಬಾರದು,
7. ಈ ಆದೇಶವಾದ ಹದಿನೈದು ದಿನಗಳ ಒಳಗಾಗಿ ಅರ್ಜಿದಾರ/3ನೇ ಆರೋಪಿತ ಬೆಂಗಳೂರಿನ ಮೆಯೋಹಾಲ್ ಘಟಕದ 10ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿ ನ್ಯಾಯಾಲಯದ ಮುಂದೆ ಹಾಜರಾಗಿ ನಿಯಮಿತ ಜಾಮೀನು ಕೋರಿ ಅರ್ಜಿ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಮಂಜೂರಾಗಿರುವ ನಿರೀಕ್ಷಣಾ ಜಾಮೀನು ತನ್ನಿಂತಾನೇ ರದ್ದಾಗುವುದು.

*57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,*
*ಮೆಯೋಹಾಲ್ ಘಟಕ, ಬೆಂಗಳೂರು ನಗರ.*